ನಿಲುವು ಬೆಳೆಸಿಕೊಂಡರೆ ಅದು ದುರಂತವೇ ಸರಿ. ಕುಂಬಳೆಯವರಂಥ ಕಲಾವಿದರೂ, ಕಳೆದ ದಶಕಗಳ ಯಕ್ಷಗಾನ ಕಲೆಯೂ, ಪ್ರೇಕ್ಷಕವರ್ಗವೂ ಹೀಗೆ ಸ್ವವಿಮರ್ಶೆಯ, ಬೆಳವಣಿಗೆಯ ಸಾಧ್ಯತೆಯನ್ನು ನಿರಾಕರಿಸಿದರು ಎಂದು ಹೊಳೆಯುವಂತೆ ಈ ಭಾಗದ ನಿರೂಪಣೆ ಇದೆ. ಅನೇಕ ಆಟ-ಕೂಟಗಳು, ಅರ್ಥಧಾರಿಗಳು ಮುಖ್ಯಪಾತ್ರಗಳ ದೌರ್ಬಲ್ಯ, ದೋಷಗಳನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸುವ ಹೇರಳ ಉದಾಹರಣೆಗಳಿವೆ. ಚುನಾವಣಾ ರಾಜಕೀಯಕ್ಕಾಗಿ ಬಲಪಂಥೀಯ ಸಿದ್ಧಾಂತಕ್ಕೆ ತೆತ್ತು ಕೊಂಡ ಕಲಾವಿದರು ಹಾಗೆ ವಿಮರ್ಶೆಯ ವಿವೇಕವನ್ನು ಕಳೆದುಕೊಂಡವರಾಗಿಯೇ ಕಾಣುತ್ತಾರೆ.

'ರಾಜಕೀಯ ರಹಿತವೆಂಬ ಅನೂಹ್ಯದ ಊಹೆ' ಎಂಬ ಆರನೆಯ ಅಧ್ಯಾಯದಲ್ಲಿ ನಿತ್ಯಾನಂದ ಶೆಟ್ಟಿಯವರ ಅಧ್ಯಯನ ಮತ್ತಷ್ಟು ವ್ಯಾಪ್ತಿಯನ್ನು ಪಡೆಯುತ್ತದೆ. ಮೂರನೆಯ ಶತಮಾನದಿಂದ ಇಂದಿನವರೆಗಿನ ಕರಾವಳಿಯ ಚರಿತ್ರೆಯಲ್ಲಿ ಮಹತ್ವದ್ದು ಎಂದು ಅವರು ತಿಳಿದಿರುವ ನೂರು ಘಟನೆಗಳನ್ನು ಪಟ್ಟಿ ಮಾಡುತ್ತಾರೆ. ಇದರ ಮೂಲಕ ಕರಾವಳಿಯ ಪ್ರದೇಶವನ್ನು ಅದೆಷ್ಟು ಸಮುದಾಯಗಳು ಕೂಡಿ ರಾಜಕೀಯ, ಆರ್ಥಿಕ, ಸಾಂಸ್ಕೃತಿಕ, ಆಡಳಿತಾತ್ಮಕ ಕಟ್ಟೋಣವನ್ನು ನಡೆಸಿದ್ದಾರೆ, ಕರಾವಳಿಯನ್ನು 'ಸ್ವಕೀಯರು' ಮತ್ತು 'ಪರಕೀಯರು' ಎಂದು ವಿಭಜಿಸಿ ರಾಜಕೀಯ ಮಾಡುವುದು ಎಷ್ಟು ಅಸಂಗತವಾಗಿ ತೋರುತ್ತದೆ ಎಂಬುದನ್ನು ಓದುಗರು ಮನಗಾಣುವಂತೆ ಮಾಡಿದ್ದಾರೆ.

'ಕರಾವಳಿಯ ಇಂದಿನ ಕೋಮುವಾದದ ವೃತ್ತಾಂತ ಸ್ವರ್ಗಸದೃಶವಾದ ಸಮಾಜವೊಂದು ಕೋಮುವಿಷಮತೆಯ ನರಕಕ್ಕೆ ಪತನ ಹೊಂದಿದ ಕಥೆಯಲ್ಲ.' ಇಲ್ಲೂ ಧಾರ್ಮಿಕ, ಸಾಮುದಾಯಿಕ, ಜಾತೀಯ ವೈಷಮ್ಯಗಳು ಇದ್ದೇ ಇದ್ದವು, 'ನಿರ್ದಿಷ್ಟ ಸಮಾಜವೊಂದು ತನ್ನ ಬಾಹ್ಯ-ಆಂತರಿಕ ಒತ್ತಡ ಮತ್ತು ಚಲನೆ, ಪ್ರತಿಚಲನೆಗಳ ಮೂಲಕ' ಈಗ ಇಂಥ ಸಾಂಸ್ಕೃತಿಕರೂಪ ಪಡೆದುಕೊಂಡಿದೆ ಎನ್ನುವ ತೀರ್ಮಾನ ಈ ಅಧ್ಯಾಯದಲ್ಲಿ ರೂಪು ಪಡೆದಿದೆ. ಕರಾವಳಿಯಲ್ಲಿ ಬಲಪಂಥೀಯ ಸಿದ್ಧಾಂತ ಪ್ರಬಲಗೊಳ್ಳಲು ಕಾರಣಗಳನ್ನು ಹುಡುಕುತ್ತಾ ಸೈದ್ಧಾಂತಿಕ ಅರಿವಿನಿಂದ ಕೂಡಿದ ಘನವಾದ ಹೋರಾಟಗಳು ಇಲ್ಲದೆ ಹೋದದ್ದು, ಭೂಮಿಯನ್ನು ಹೊಸತಾಗಿ ಪಡೆದುಕೊಂಡ ಶೂದ್ರಸಮುದಾಯಗಳಿಗೆ ರಾಜಕೀಯ ಅಸ್ಮಿತೆಯನ್ನು ಒದಗಿಸಲು ಎಡ ಪಕ್ಷಗಳು ವಿಫಲವಾಗಿ 'ಪೌರಾಣಿಕ ಸಂಕೇತಗಳ ಮೂಲಕ 'ಐಕ್ಯ'ವನ್ನು ಸಾಧಿಸುವ' ಸಂಘಟನೆಗಳು ಸುಲಭವಾಗಿ ಮೇಲುಗೈ ಸಾಧಿಸಿದ್ದು ಕಾರಣಗಳೆಂಬ ವಿಚಾರ ಪ್ರಸ್ತಾಪವಾಗುತ್ತದೆ. ಹತ್ತೊಂಬತ್ತನೆಯ ಶತಮಾನ, 1970ರ ದಶಕ ಮತ್ತು ಅನಂತರದ ವರ್ಷಗಳಲ್ಲಿ ಆದ ಸ್ಥಿತ್ಯಂತರಗಳು ಎಷ್ಟು ಆತ್ಯಂತಿಕವಾಗಿದ್ದವು ಎಂಬುದನ್ನು ಸೂಚಿಸುತ್ತಾ ಬಿಜೆಪಿ ಪ್ರವರ್ಧಮಾನಕ್ಕೆ ಬಂದ ಅವಧಿ ಮತ್ತು ಯಕ್ಷಗಾನ ರಾಜಕೀಯ ಸಿದ್ಧಾಂತದ ಮುಖವಾಣಿಯಾದ ಬಗೆಯನ್ನು ಈ ಅಧ್ಯಾಯ ತಿಳಿಸುತ್ತದೆ. 'ಯಕ್ಷಗಾನ, ಬಯಲಾಟ, ತಾಳಮದ್ದಳೆಗಳಲ್ಲಿ ಕಾಣುವ ಮತೀಯವಾದ... ಕಲಾವಿದರದ್ದು ಮಾತ್ರವಲ್ಲ ನಮ್ಮೆಲ್ಲರದ್ದೂ ಹೌದು. ಇಡೀ... ನಮ್ಮ ಸಾರ್ವಜನಿಕ ಜೀವನದಲ್ಲಿ ಕಾಣುವ ಭ್ರಷ್ಟತೆಯ ಪ್ರತಿಫಲನದಂತೆ ಇದು' ಎಂಬ ವಿಷಾದದ ದನಿ ಮನಸ್ಸನ್ನು ತಟ್ಟುತ್ತದೆ.

'ಭಾವವಿಜ್ಞಾನ'ವೆಂಬ ಆರನೆಯ ಅಧ್ಯಾಯವು 'ರಾಜಕಾರಣಕ್ಕೆ ಇರುವ ತಾತ್ವಿಕ ಘನತೆಯನ್ನು ಮರೆತು (ಮನುಷ್ಯರು) ಚಿಲ್ಲರೆಯಾಗಲು ಹವಣಿಸಿದಾಗ ಕಲೆ ಮತ್ತು ರಾಜಕಾರಣ, ವಿಜ್ಞಾನ ಮತ್ತು ರಾಜಕಾರಣಗಳ ನಡುವೆ ಸಂಘರ್ಷ ಹುಟ್ಟುತ್ತದೆ' ಎಂದು ಹೇಳಿ ಯಕ್ಷಗಾನಕ್ಕೆ ಈ ಮಾತನ್ನ ಅನ್ವಯಿಸಿದ ವಿವರಣೆಗಳಿವೆ. ಯಕ್ಷಗಾನ ಕಲಾವಿದರು ತಾವು ಆಟದ ಒಳಗೂ ಪಾತ್ರವಾಗಿ ಹೊರಗೂ ಮನುಷ್ಯರಾಗಿ ಇರುವವರು ಎಂಬುದನ್ನು ಮರೆತಾಗ ಏನಾಗುತ್ತದೆ? ಲಂಕಾದಹನದಂಥ ಆಟದಲ್ಲಿ ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಕಿಲ್ಲೆಯವರಂಥವರು ರಾಮನ ಪಾತ್ರಧಾರಿಯಾಗಿ, ಸ್ವಾತಂತ್ರ್ಯೋತ್ತರ ಕಾಲದಲ್ಲಿ ಕಾಂಗ್ರೆಸ್ ಪರ ಒಲವಿದ್ದ ಶೇಣಿಯವರು ರಾಮನ ಪಾತ್ರಧಾರಿಯಾಗಿ, ಆನಂತರ ಬಿಜೆಪಿಯ